ಅಸಲು ದಾವಾ ಸಂಖ್ಯೆ ಪಿ.ಡಬ್ಲ್ಯೂ- **1**

ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾದ ದಿನಾಂಕ **01-07-2025**

ಪಾಟೀ ಸವಾಲು ಃ ಬಿ.ಎಸ್. ಪ್ರತಿವಾದಿಯಪರ ವಕೀಲರಿಂದ

ನಾನು **10** ನೇ ತರಗತಿಯ ವರೆಗೆ ಓದಿರುತ್ತೇನೆ. ನನಗೆ ದಾವಾ ಸ್ವತ್ತಿನ ಬಗ್ಗೆ ಗೊತ್ತು. ನಾನು ಈ ದಾವೆಯನ್ನು ದಾರಿಗೆ ಸಲ್ಲಿಸಿರುತ್ತೇನೆ. ದಾವಾ ಸಲ್ಲಿಸುವ ಸಮಯದಲ್ಲಿ ದಾವಾ ಆಸ್ತಿಯು ಪಂಚಾಯ್ತಿಯ ವ್ಯಾಪ್ತಿಗೆ ಸೇರಿತ್ತು. ಪ್ರತಿವಾದಿಗ ಸ್ವತ್ತು ಸರ್ವೆ ನಂಬರ್ ನಲ್ಲಿ ಇದೆ. ನಾನು ದಾವಾ ಸ್ವತ್ತುಗಳಿಗೆ ಸಂಬಂದಿಸಿದಂತೆ ಗ್ರಾಮಠಾಣ ಮತ್ತು ಸರ್ವೆ ನಂಬರ್ ನ ದಾಖಲೆಗಳನ್ನು ಕೊಟ್ಟಿರುತ್ತೇನೆ.

**2.** ದಾವಾ ಆಸ್ತಿಗಳು ಮತ್ತು ಪ್ರತಿವಾದಿಗಳ ಸ್ವತ್ತು ಒಳಗೊಂಡಂತೆ ಮೂಲತಹ ಸರ್ವೆ ನಂಬರ್ 183/11 ಬಿ ಒಟ್ಟು 14 ಗುಂಟೆ ನನ್ನ ತಂದೆ ರಾಮೇಗೌಡ ಮತ್ತು ನನ್ನ ಚಿಕ್ಕಪ್ಪ ಹೊನ್ನೇಗೌಡರಿಗೆ ಸೇರಿತ್ತು ಎಂದರೆ ಸಾಕ್ಷಿಯು ನನ್ನ ತಂದೆ ರಾಮೇಗೌಡರಿಗೆ ಮಾತ್ರ ಸೇರಿತ್ತು ಎಂದು ನುಡಿಯುತ್ತಾರೆ. ಸದರಿ 14 ಗುಂಟೆ ಜಮೀನು 1984 ರಂದು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತನೆಗೊಂಡಿತ್ತು ಎಂದರೆ ಸರಿ.

3. ಆ ರೀತಿ ಪರಿವರ್ತನೆಗೊಂಡ ನಂತರ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ದಿನಾಂಕ 24.01.1985 ರಂದು ಪೂರ್ವ ಪಶ್ಚಿಮ 23 ಗಜ ಮತ್ತು ಉತ್ತರ ದಕ್ಷಿಣ 21 ಗಜ ವಿಸ್ತೀರ್ಣವನ್ನು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಎಂದರೆ ಸರಿ. ನಂತರ ನನ್ನ ಚಿಕ್ಕಪ್ಪ ಹೊನ್ನೇಗೌಡರವರು ದಿನಾಂಕ 20.02.1998 ರ ಪೂರ್ವ ಪಶ್ಚಿಮ 34 ಅಡಿ ಮತ್ತು ಉತ್ತರ ದಕ್ಷಿಣ 44 ಅಡಿ ವಿಸ್ತೀರ್ಣವನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡಿರುವುದು ನನಗೆ ಗೊತ್ತಿಲ್ಲ.

4. 1 ಮತ್ತು 2 ನೇ ಪ್ರತಿವಾದಿಗಳು ತಾವು ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ಕ್ರಯಕ್ಕೆ ಪಡೆದ ದಿನದಿಂದ ಸಂಪೂರ್ಣ ಮಾಲೀಕರಾಗಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿ. ಇದುವರೆಗೂ 1 ಮತ್ತು 2 ನೇ ಪ್ರತಿವಾದಿಗಳ ಕ್ರಯಪತ್ರಗಳನ್ನು ಮತ್ತು ಅವರ ಸ್ವತ್ತುಗಳನ್ನು ನಾನಾಗಲೀ ನನ್ನ ತಂದೆಯಾಗಲೀ ನನ್ನ ತಂದೆ ಜೀವಂತ ಇದ್ದಾಗ ಪ್ರಶ್ನೆ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆಗ ಪ್ರತಿವಾದಿಗಳು ರಸ್ತೆಯನ್ನು ಬಿಟ್ಟಿದ್ದು ಸದರಿ ರಸ್ತೆಗೆ ನಮಗೆ ಯಾವುದೇ ತೊಂದರೆ ನೀಡಿರಲಿಲ್ಲ, ಈಗ ಪ್ರತಿವಾದಿಗಳು ರಸ್ತೆಯಲ್ಲಿ ಓಡಾಡಲು ನಮಗೆ ಅಡ್ಡಿ ಪಡಿಸಿದ್ದರಿಂದ ಈ ದಾವೆಯನ್ನು ಸಲ್ಲಿಸಿರುತ್ತೇವೆ.

5. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ 14 ಗುಂಟೆ ಜಮೀನನ್ನು ವಿಭಾಗ ಮಾಡಿಕೊಂಡಿರಲಿಲ್ಲ. ನಾನು ಮತ್ತು ನನ್ನ ಚಿಕ್ಕಪ್ಪ ಪ್ರತ್ಯೇಕವಾಗಿ ವಾಸವಿದ್ದೇವೆ. ಇದವರೆಗೂ ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ಭಾಗವನ್ನು ಮಾಡಿಕೊಂಡಿರುವುದಿಲ್ಲ ಅವರ ಪಾಡಿಗೆ ಅವರು ಮನೆ ಕಟ್ಟಿಕೊಂಡು ಅವರು ವಾಸವಿದ್ದಾರೆ ಅದೇ ರೀತಿ ನಾವು ಮನೆ ಕಟ್ಟಿಕೊಂಡು ಪ್ರತ್ಯೇಕವಾಗಿ ವಾಸವಿದ್ದೇವೆ.

6. 1 ಮತ್ತು 2 ನೇ ಪ್ರತಿವಾದಿಗಳಿಗೆ ಮಾರಾಟ ಮಾಡಿದ ಮೇಲೆ ಉಳಿಕೆ ಸ್ವತ್ತಿಗೆ ಸಂಬಂದಿಸಿದಂತೆ ದಾಖಲಾತಿಗಳನ್ನು ಕೊಟ್ಟಿರುತ್ತೇನೆ. 14 ಗುಂಟೆ ಜಮೀನನ್ನು ಅನ್ಯಕ್ರಾಂತ ಮಾಡುವಾಗ ಯಾವ ಕಡೆಗೆ ರಸ್ತೆಯನ್ನು ಬಿಡಲಾಗಿದೆ ಎಂದು ನಾನು ಅನ್ಯಕ್ರಾಂತ ದಾಖಲೆಯನ್ನು ನೋಡಿರುವುದಿಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಉತ್ತರಕ್ಕಾದಂತೆ ಓಡಾಡುತ್ತಿದ್ದ ಜಾಗದಲ್ಲಿ ನಾವು ಸಹ ಓಡಾಡುತ್ತಿದ್ದೇವೆ. ನನ್ನ ತಂದೆ ಓಡಾಡುತ್ತಿದ್ದ ರಸ್ತೆಯು ಎಷ್ಟು ಅಡಿ ಉದ್ದ ಮತ್ತು ಅಗಲ ಇದೆ ಎಂದು ನನಗೆ ಹೇಳಲು ಆಗುವುದಿಲ್ಲ, ಆದರೆ ಸದರಿ ರಸ್ತೆಯಲ್ಲಿ ಟ್ರಾಕ್ಟರ್ ಮತ್ತು ಎತ್ತಿನಗಾಡಿಯನ್ನು ತೆಗೆದುಕೊಂಡು ಹೋಗುತ್ತಿದ್ದೇವು ಎಂದು ನುಡಿಯುತ್ತಾರೆ.

7. ಸದರಿ ರಸ್ತೆಯನ್ನು ನಮ್ಮ ಮನೆಯಿಂದ ದಕ್ಷಿಣದ ಕಡೆಗೆ ಇರುವ ನಮಗೆ ಸೇರಿದ ಹುಲ್ಲು ಕೊಪ್ಪಲಿಗೆ ಹೋಗಲು ಉಪಯೋಗಿಸುತ್ತಿದ್ದೇವೆ. ನಮ್ಮ 14 ಗುಂಟೆ ಸ್ವತ್ತಿನ ದಕ್ಷಿಣಕ್ಕೆ ಅಶ್ವತ್ಥಾಚ಼ರ್ ರವರ ಮನೆ ಇದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾವು ದಾವೆಯನ್ನು ಸಲ್ಲಿಸುವಾಗ ನಾರಾಯಣಚಾರ್ ಅವರು ಇದ್ದರು ಎಂದು ನುಡಿಯುತ್ತಾರೆ.

8. 14 ಗುಂಟೆ ಜಮೀನಿನ ಪೂರ್ವಕ್ಕೆ ಜವರೇಗೌಡ ಅಮಾಸೇಗೌಡ ರವರ ಮನೆ ಮತ್ತು ಜಮೀನು, ಪಶ್ಚಿಮಕ್ಕೆ ನಾರಾಯಣಚಾರ್ ರವರ ಮನೆ, ಉತ್ತರಕ್ಕೆ ಪರ್ಲಕ್ಕಿಗೌಡ ಮತ್ತು ಎಲ್.ಐ.ಸಿ ಪುಟ್ಟಸ್ವಾಮಿಗೌಡ ರವರ ತೋಟ, ದಕ್ಷಿಣಕ್ಕೆ ನಾರಾಯಣಚಾರ್ ರವರ ಮನೆ ಈಗ ಅಶ್ವತ್ ಚಾರ್ ರವರು ಇದ್ದಾರೆ. 14 ಗುಂಟೆ ಸ್ವತ್ತಿನ ದಕ್ಷಿಣಕ್ಕೆ ಗ್ರಾಮಠಾಣ ಬರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಗ್ರಾಮಠಾಣದಲ್ಲಿ ನಾವು ಹುಲ್ಲುಕೊಪ್ಪಲು ಮತ್ತು ಶಡ್ಡು ಮಾಡಿಕೊಂಡಿದ್ದೇವೆ ಎಂದು ನುಡಿಯುತ್ತಾರೆ. ಸದರಿ ಹುಲ್ಲುಕೊಪ್ಪಲು ಮತ್ತು ಶಡ್ಡು ಇರುವ ಬಗ್ಗೆ ದಾಖಲೆಯನ್ನು ಕೊಟ್ಟಿರುತ್ತೇನೆ.

9. ಸದರಿ ಹುಲ್ಲುಕೊಪ್ಪಲು ಮತ್ತು ಶಡ್ಡು ಪಂಚಾಯ್ತಿಯಲ್ಲಿ ದಾಖಲೆಇರುವ ಬಗ್ಗೆ ನ್ಯಾಯಾಲಯಕ್ಕೆ ಕೊಟ್ಟಿರುತ್ತೇವೆ. 14 ಗುಂಟೆ ಸ್ವತ್ತಿನ ದಕ್ಷಿಣಕ್ಕೆ 1 ಮತ್ತು 2 ನೇ ಪ್ರತಿವಾದಿಗ ಸ್ವತ್ತು ಬರುತ್ತದೆ ಎಂದರೆ ಸಾಕ್ಷಿಯು ನಮ್ಮ ಹುಲ್ಲು ಕೊಪ್ಪಲಿನ ಉತ್ತರಕ್ಕೆ 1 ನೇ ಪ್ರತಿವಾದಿಯ ಸ್ವತ್ತು, ಪೂರ್ವ ಭಾಗಕ್ಕೆ 2 ನೇ ಪ್ರತಿವಾದಿಯ ಸ್ವತ್ತು ಬರುತ್ತದೆ. 1 ನೇ ಪ್ರತಿವಾದಿಯ ಸ್ವತ್ತು ಮತ್ತು 2 ನೇ ಪ್ರತಿವಾದಿಯ ಸ್ವತ್ತು ಹೊಂದಿಕೊಂಡಂತೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಅವರಿಬ್ಬರ ಸ್ವತ್ತಿನ ನುಡವೆ ದಾರಿ ಇರುತ್ತದೆ ಎಂದು ನುಡಿಯುತ್ತಾರೆ.

10. 1 ಮತ್ತು 2 ನೇ ಪ್ರತಿವಾದಿಗಳ ಕ್ರಯಪತ್ರದಲ್ಲಿ ನಮೂದಿಸಿರುವ ವಿಸ್ತೀರ್ಣ ಮತ್ತು ಚಕ್ಕುಬಂದಿಗೆ ನಮ್ಮದೇನು ತಕರಾರು ಇರುವುದಿಲ್ಲ. ಸಾಕ್ಷಿಯು ಮುಂದುವರೆದು ನಾವು ಓಡಾಡುತ್ತಿದ್ದ ರಸ್ತೆಗೆ ಅಡ್ಡಿ ಪಡಿಸಿದ್ದರಿಂದ ಈ ದಾವೆ ಸಲ್ಲಿಸಿರುವುದಾಗಿ ನುಡಿಯುತ್ತಾರೆ.

11. ರಸ್ತೆ ಇರುವ ಬಗ್ಗೆ ಕಂದಾಯ ದಾಖಲೆಗಳನ್ನಾಗಲಿ, ಅಥವಾ ಪಂಚಾಯ್ತಿಯ ದಾಖಲೆಗಳನ್ನಾಗಲೀ ಹಾಜರು ಪಡಿಸಿರುವುದಿಲ್ಲ, ಆದರೆ ಪಂಚಾಯ್ತಿ ಪಾರಿಕತ್ತನ್ನು ಹಾಜರುಪಡಿಸಿರುತ್ತೇವೆ. ಯಾವುದೇ ರಸ್ತೆ ಇಲ್ಲದಿದ್ದರೂ ಸಹ ನಾವು ಪಂಚಾಯ್ತಿ ಪಾರಿಕತ್ತಿನಲ್ಲಿ ರಸ್ತೆಇರುವುದಾಗಿ ದಾಖಲೆಯನ್ನು ಸೃಷ್ಟಿಸಿಕೊಂಡಿದ್ದೇವೆ ಎಂದರೆ ಸರಿಯಸಲ್ಲ.

ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಲಾಗಿ, ಸಮಯ ನೀಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಸಾ. ಹೇ. ಬೆ. ಮಾಡಿಸಲಾಯಿತು.

ಓ.ಹೇ.ಕೇ.ಸ.ಇದೆ

ಅಪರ ಸಿವಿಲ್ ನ್ಯಾಯಾಧೀಶರು
ನಾಗಮಂಗಲ